2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 2184 ಃ 2020

| | | | |
|---|---|---|---|
| ಸಾಕ್ಷಿದಾರರ ಹೆಸರು | ಲೀನಾ ಚೇತನ್ | ಸಿ ಡಬ್ಲ್ಯು | 1 |
| ಗಂಡನ ಹೆಸರು | ಚೇತನ್ | ಪಿ ಡಬ್ಲ್ಯು | 1 |
| ವಯಸ್ಸು | 49 ವರ್ಷ | | |
| ಉದ್ಯೋಗ | ವ್ಯಾಪಾರ | | |
| ವಾಸಸ್ಥಾನ | ಬಸವನಗುಡಿ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 02.07.2024.

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ಚಾಸಾ 2 ನನ್ನ ಗಂಡ. ಚಾಸಾ 3 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ನನ್ನ ಮಾಲೀಕತ್ವಕ್ಕೆ ಸೇರಿದ ಒಂದು ಕಾಫಿ ತೋಟ ಇದೆ. 2014ನೇ ಸಾಲಿನಲ್ಲಿ ನಾನು ಒಂದು ಕೆಫೆ ನಡೆಸುತ್ತಿದ್ದೆ. ಆರೋಪಿತರು ಸದರಿ ಕೆಫೆಯ ಮ್ಯಾಂಟೇನೆನ್ಸ್ ಮಾಡುತ್ತಿದ್ದು, ತಿಂಗಳಿಗೆ 50,000/- ರೂ ನಂತರೆ ಸದರಿ ಕೆಫೆಯನ್ನು ನಾನು ಬಾಡಿಗೆಗೆ ಕೊಟ್ಟಿದ್ದು ಆದರೆ ನನಗೆ ಯಾವುದೇ ಬಾಡಿಗೆಯನ್ನು ಕೊಟ್ಟಿರುವುದಿಲ್ಲ. ಬಾಡಿಗೆಯನ್ನು ಕೇಳಲು ಹೋದರೆ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಸದರಿ ಕೆಫೆಯ ಸಂಪೂರ್ಣ ತೆರಿಗೆಯನ್ನು ನಾನು ಕಟ್ಟಿರುತ್ತೇನೆ. ಬಿ.ಬಿ.ಎಂ.ಪಿ ಯವರು ಬಂದು ನನ್ನ ಕೆಫೆಯನ್ನು ಲಾಕ್ ಮಾಡಿಕೊಂಡು ಹೋಗಿರುತ್ತಾರೆ. ಗಂಡಸರು ಹೆದರಿಸುವ ರೀತಿಯಲ್ಲಿ ಆರೋಪಿತರು ನನಗೆ ಹೆದರಿಸುತ್ತಿದ್ದರು. ಸಾಕ್ಷಿಯು ದೂರು ನೀಡಿದೆನು. ಅದನ್ನು ನಿಪಿ-1 ಹಾಗೂ ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-1ಎ ಎಂದು ಗುರ್ತಿಸಿದ್ದೇನೆ. ನಾನು ದೂರು ನೀಡಿದ ನಂತರ ದಿಃ02.05.2019 ರಂದು ಸ್ಥಳಕ್ಕೆ ಬಂದು ಚಾಸಾ 2 ಮತ್ತು 3 ರವರ ಸಮಕೆಮ ಮಧ್ಯಾಹ್ನ 03.00 ರಿಂದ 3.30 ವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ. ಅದನ್ನು ನಿಪಿ-2 ಹಾಗೂ ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-2ಎ ಎಂದು ಗುರ್ತಿಸಿದ್ದೇನೆ. ನಾನು ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಸದರಿ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ ಎಂದು ಹಿರಿಯ ಸ.ಸ.ಅ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು ಅವರಿಗೆ ಅನುಮತಿ ನೀಡಲಾಯಿತು.

ಆರೋಪಿತರು ಸದರಿ ಕೆಫೆಯನ್ನು ರಿನೋವೇಷನ್ ಮಾಡುತ್ತೇವೆ ಎಂದು ಹೇಳಿ ಪ್ಯಾಂಟಿಂಗ್ ಮತ್ತು ಸ್ಕಲ್ಪಚರ್ ಅನ್ನು ಹಾಳು ಮಾಡಿರುತ್ತಾರೆ. ಇದರ ಬಗ್ಗೆ ನಾವು ಆರೋಪಿತರೊಂದಿಗೆ ಕೇಳಿದಾಗ ಅವರು ಯಾವುದೇ ರಿಪೇರಿ ಮಾಡಿ ಕೊಟ್ಟಿರುವುದಿಲ್ಲ. ದಿಃ11.10.2015 ರಂದು ನಾನು ಮತ್ತು ಚಾಸಾ 2 ರವರು ಆರೋಪಿರೊಂದಿಗೆ ಮಾತುಕತೆಗೆ ಹೋದಾಗ ನನಗೆ ಕೆಟ್ಟ ಭಾಷೆಯಲ್ಲಿ ಬೈದಿರುತ್ತಾರೆ. ಚಾಸಾ 2 ಮತ್ತು 3 ರವರ ಸಮಕ್ಷಮ ನಾನು ಮಹಿಳೆ ಎಂದು ಗೊತ್ತಿದ್ದರೂ ಸಹ ನನ್ನನ್ನು ಸಾರ್ವಜನಿಕರ ಮುಂದೆ ಅವಮಾನ ಮಾಡಿರುತ್ತಾರೆ. ಆರೋಪಿತರು ನನಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ವಕೀಲರು ಗೈರು ಹಾಜರಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)

2ನೇ ಅ ಮು ಮ ದಂ.